**ದಿನಾಂಕ: 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯವಿಚಾರಣೆ: 2ನೇ ಎದುರುದಾರರ ಪರ ಶ್ರೀ.ಎ.ಎಸ್.ಡಿ. ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ.

| | |
|---|---|
| ನಿಆರ್ -1 | Authorization letter |
| ನಿಆರ್ -2 | Insurance Policy |

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ಅಪಘಾತವಾದ ದಿನ ಕಾರ್ ನಂ.ಕೆಎ-29 ಎನ್-6967ನೇದ್ದಕ್ಕೆ ವಿಮೆ ಚಾಲನೆಯಲ್ಲಿ ಇತ್ತಾ ಎಂದರೆ ನಿಯಮಗಳು ಮತ್ತು ಷರತ್ತುಗಳ ಮೇಲೆ ಚಾಲ್ತಿಯಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಅಪಘಾತವಾದ ದಿನ ಕಾರ್ ಚಾಲಕನ ಡಿ.ಎಲ್. ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಯಡ್ರಾಮಿ ಪೊಲೀಸರು ಅಪಘಾತವು ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದೋಷಾರೋಪಣೆ ಪಟ್ಟಿಯನ್ನು ನಿಮ್ಮ ಕಂಪನಿಯವರಾಗಲೀ ಮತ್ತು ಕಾರ್ ಚಾಲಕನಾಗಲೀ ಎಲ್ಲಿಯೂ ತಕರಾರು ಮಾಡಿಲ್ಲ ಎಂದರೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಪರಿಹಾರ ಕೊಡುವ ಬಾಧ್ಯತೆಯನ್ನು ಉಳಿಸುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ